

# ತ್ರಿನೇತ್ರ ದಶಭುಜ ಆಂಜನೇಯ




**ಕಥೆ: ರೇವತಿ** **ಚಿತ್ರ: ತಾರಿಣಿ ಬಾಲಕೃಷ್ಣ**


1 ಶ್ರೀರಾಮನು ರಾವಣನನ್ನು ಸಂಹರಿಸಿದ ಬಳಿಕ ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿದ. ಅಯೋಧ್ಯೆಗೆ ಮರಳುವಾಗ ನಡುವೆ ಅವನು ಭರದ್ವಾಜ ಮುನಿಗಳ ಆಶ್ರಮದಲ್ಲಿ ಸೀತೆ, ಲಕ್ಷ್ಮಣ ಹಾಗೂ ಹನುಮಂತರೊಂದಿಗೆ ವಾಸಿಸುತ್ತಿದ್ದ. ಅಷ್ಟರಲ್ಲಿ ....













4
ಭರತನು ನಂದಿಗ್ರಾಮದಲ್ಲಿ ನಿಮಗಾಗಿ ಕಾಯುತ್ತಿದ್ದಾನೆ. ನೀವು ಸ್ವಲ್ಪ ತಡಮಾಡಿದರೂ ಅವನು ಅಗ್ನಿಪ್ರವೇಶ ಮಾಡುವನು. ಲಕ್ಷ್ಮಣನಿಂದ ಅಗಲಿ, ತಪಸ್ಸನ್ನು ಆಚರಿಸುತ್ತಿರುವ ಊರ್ಮಿಳೆಯ ಬಗ್ಗೆ ಆಲೋಚಿಸು. ಅದೇ ರೀತಿ ಅಯೋಧ್ಯೆಯ ಜನರು ನಿನ್ನ ಪಟ್ಟಾಭಿಷೇಕವನ್ನು ನೋಡಲು ಕಾಯುತ್ತಿದ್ದಾರೆ. ಅವಸರವಾಗಿ ಮಾತು ಕೊಡಬೇಡಿ, ಸ್ವಾಮಿ.
5
ಸೀತೆ, ನೀನು ಚಿಂತಿಸಬೇಡ. ನಿನ್ನೊಂದಿಗೆ ಚರ್ಚಿಸದೆ ನಾನು ಯಾರಿಗೂ ಮಾತುಕೊಡಲಾರೆ.
ನಿಮ್ಮ ಬದಲಿಗೆ ನೀವು ಬೇರೆ ಯಾರನ್ನಾದರೂ ಕಳುಹಿಸಲಾಗದೆ?
ನಾನು ಯಾರನ್ನು ಕಳುಹಿಸಲಿ? ನೀನೆ ಹೇಳು.
6
ಪ್ರಭು, ನೀವು ಅಪ್ಪಣೆ ಮಾಡಿದರೆ ಯಾರೇ ಆದರೂ ಈಗಲೇ ಹೊರಡುವರು. ಅದರೆ, ನಮ್ಮ ಪುಣ್ಯಶಾಲಿ ಮಾರುತಿಯೊಬ್ಬನೇ ನಿನ್ನ ಕಾರ್ಯಕ್ಕಾಗಿ ಎಂತಹ ತ್ಯಾಗವನ್ನಾದರೂ ಮಾಡಬಲ್ಲನು.
7
ಅಂದರೆ ನನ್ನ ಬದಲಾಗಿ ವಾಯುಪುತ್ರ ಹನುಮನನ್ನು ಕಳುಹಿಸಬೇಕೆಂದು ನಿನ್ನ ಅಭಿಪ್ರಾಯವೆ? ನನ್ನ ಪಟ್ಟಾಭಿಷೇಕವನ್ನು ನೋಡುವ ಆನಂದ ಅವನಿಗಿಲ್ಲವೆ?
ಪ್ರಭು, ವಾಯುಪುತ್ರನ ಬಗ್ಗೆ ನನ್ನಷ್ಟು ಕಾಳಜಿ ಇನ್ನಾರಿಗಿದೆ? ನಿಮ್ಮ ಪಟ್ಟಾಭಿಷೇಕವನ್ನು ನೋಡಲು ಅವನು ಕಾತರನಾಗಿ ಕಾಯುತ್ತಿದ್ದಾನೆ. ಅದು ಮುಗಿದ ಮೇಲೆ ಅವನು ಯುದ್ಧ ಮಾಡಲು ಹೋಗಲಿ.
ಅಮ್ಮ, ನನ್ನ ಹೃದಯದ ಬಯಕೆಯನ್ನು ನೀವು ಹೇಗೆ ಬಣ್ಣಿಸಿದಿರಿ! ಈ ವಾನರನ ಭಾಗ್ಯ ಅದೆಷ್ಟು ದೊಡ್ಡದು! ಪಟ್ಟಾಭಿಷೇಕ ಮುಗಿದ ಕೂಡಲೇ ನಾನು ರಾಕ್ಷಸರ ಬಳಿಗೆ ಯುದ್ಧ ಮಾಡಲು ಹೊರಡುತ್ತೇನೆ.


8
ಪಟ್ಟಾಭಿಷೇಕವಾದ ಮೇಲೆ ಹನುಮಂತನು ಕಾಳಗಕ್ಕೆ ಹೊರಡಲು ಸಿದ್ಧನಾದ.
ಮಾರುತಿ, ನಿನಗೇನು ಬೇಕು?- ಕೇಳು. ನನ್ನ ಕೋದಂಡವನ್ನು ಕೊಡಲೆ?
ಸ್ವಾಮಿ, ನಿಮ್ಮ ನಾಮಕ್ಕಿಂತ ಹೆಚ್ಚಿನ ಸಾಮರ್ಥ್ಯ ನೀಡುವ ಆಯುಧ ಈ ಜಗತ್ತಿನಲ್ಲಿ ಬೇರೇನಿದೆ?
9
ಮಾರುತಿ, ನಿನ್ನ ಹೃದಯದಲ್ಲಿ ನನ್ನನ್ನು ಹಾಗೂ ಸೀತೆಯನ್ನು ನೀನು ಧರಿಸಿಕೊಂಡಿರುವೆ. ನನ್ನ ಕೋದಂಡವು ನಿನಗೆ ವಿಜಯವನ್ನು ಗಳಿಸಿಕೊಡುವುದು. ತ್ರಿಮೂರ್ತಿಗಳೆ, ಇಂದ್ರಾದಿ ದೇವತೆಗಳೆ, ಮಾರುತಿಯು ರಕ್ತಬಿಂದು-ರಕ್ತರಾಕ್ಷಸರೆಂಬ ಅಸುರರನ್ನು ಸಂಹಾರ ಮಾಡಲು ಹೊರಟಿದ್ದಾನೆ. ಅವನನ್ನು ಆಶೀರ್ವದಿಸಿ ಕಳುಹಿಸಿರಿ.
10
ಮಾರುತಿ, ನನ್ನ ಶಂಖ, ಚಕ್ರಗಳನ್ನು ಧರಿಸಿಕೋ.
ವಾಯುಪುತ್ರ, ಈ ಕಪಾಲವನ್ನು ತೆಗೆದುಕೊ. ಇದು ನಿನಗೆ ಸಹಾಯ ಮಾಡುವುದು.
ಆಂಜನೇಯ, ನನ್ನ ವಜ್ರಾಯುಧ ನಿನ್ನ ಶತ್ರುಗಳನ್ನು ನಾಶಮಾಡಿ ನಿನಗೆ ಜಯ ಲಭಿಸುವಂತೆ ಮಾಡುವುದು. ಇದನ್ನು ತೆಗೆದುಕೋ.
11
ಸಣ್ಣ ದೇವರೇ, ಈ ದೊಡ್ಡದೇವರ ರೆಕ್ಕೆಗಳು ನಿನಗೆ ಸರಿಯಾದ ಸಮಯದಲ್ಲಿ ಸಹಾಯ ಮಾಡಬಹುದು.
ವಾಯುಪುತ್ರನೇ, ನಿನ್ನೊಳಗಿರುವ ರಾಮನ ನಾಮವೇ ಎಲ್ಲಕ್ಕಿಂತಲೂ ಬಲಶಾಲಿಯಾಗಿದ್ದರೂ ಕೂಡ, ನನ್ನ ಹಣೆಗಣ್ಣು ನಿನಗೆ ಶತ್ರುವನ್ನು ನಾಶಮಾಡಲು ಸಹಾಯ ಮಾಡಬಹುದು. ಮಾರುತಿ, ಖಂಡಿತವಾಗಿಯೂ ಗೆಲುವು ನಿನ್ನದೇ.



ತಮಿಳುನಾಡಿನ ನಾಗೈ ಜಿಲ್ಲೆಯಲ್ಲಿ ತರಂಗಬಾಡಿ ಎಂಬಲ್ಲಿ ಅನಂತಮಂಗಲಂ ಎಂಬ ದೇವಾಲಯವಿದೆ. ಅಲ್ಲಿ ಹನುಮಂತನು ತ್ರಿನೇತ್ರನಾಗಿ, ಹತ್ತು ಭುಜಗಳಿಂದ ಕೂಡಿದ ಮೂರ್ತಿಯಾಗಿ ಕಾಣಿಸಿಕೊಂಡು, ಕಲಿಯನ್ನು ನಾಶಮಾಡುತ್ತಾ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ.

''ನೀವೀಗ ಈ ಸೇವೆಯ ಮಹೋದ್ದೇಶದ ಮೇಲೆ ನಿಮ್ಮ ಜೀವನವನ್ನು ಕಟ್ಟಬೇಕು. ಅದರ ಮೂಲಕ ಇತರ ಎಲ್ಲಾ ಉದ್ದೇಶಗಳೂ ಕ್ರಮೇಣ ವಿಕಸಿಸುವುವು. ಮರುಮಾತಿಲ್ಲದೆ ಗುರುಮಾತಿಗೆ ವಿಧೇಯರಾಗಿ ನಡೆಯುವುದು, ಮತ್ತು ಬ್ರಹ್ಮಚಾರಿ ಜೀವನ ನಡೆಸುವುದು, ಇದೇ ಜಯದ ರಹಸ್ಯ. ಹನುಮಂತ ಒಂದು ಕಡೆ ಸೇವೆಯ ಮಹೋದ್ದೇಶವನ್ನು ಇನ್ನೊಂದು ಕಡೆ ಇಡೀ ಜಗತ್ತೇ ಬೆರಗಾಗುವಂತಹ ಸಿಂಹಸದೃಶ ಧೈರ್ಯವನ್ನು ಪ್ರಕಟಿಸುತ್ತಾನೆ. ರಾಮನ ಕಲ್ಯಾಣಕ್ಕಾಗಿ ಪ್ರಾಣವನ್ನೇ ಅರ್ಪಿಸಲು ಅವನು ಸ್ವಲ್ಪವೂ ಅನುಮಾನಿಸಲಿಲ್ಲ. ರಾಮನ ಸೇವೆಯ ಹೊರತು ಉಳಿದುದರಲ್ಲೆಲ್ಲ ಅವನಿಗೆ ತಾತ್ಸಾರ. ಬ್ರಹ್ಮ ಶಿವ ಮುಂತಾದ ಈ ಜಗತ್ತಿನ ದೇವತೆಗಳ ಪದವಿಯೆಲ್ಲಾ ಅವನಿಗೆ ನಿಸ್ಸಾರ. ಶ್ರೀರಾಮನ ಆಣತಿಯಂತೆ ನಡೆಯುವುದೊಂದೇ ಅವನ ಜೀವನದ ವ್ರತ. ಅಂತಹ ಹೃತ್ಪೂರ್ವಕ ಭಕ್ತಿ ಬೇಕಾಗಿದೆ''.

– ಸ್ವಾಮಿ ವಿವೇಕಾನಂದ